# ಕೋರಿಕೆ

ಗಾಂಧಿ ತಾತ ನಿನ್ನ ತತ್ವ
ನಮ್ಮ ಮನದಿ ನಿಲ್ಲಲಿ;
ನ್ಯಾಯ–ನೀತಿ–ಧರ್ಮ ನಮಗೆ
ದಾರಿ ದೀಪವಾಗಲಿ.

ನಿನ್ನ ಯೋಗ, ನಿನ್ನ ತ್ಯಾಗ
ನಮಗೆ ಸ್ಫೂರ್ತಿ ನೀಡಲಿ;
ಜಾತಿ–ಭಾಷೆ ಕಲಹ ಅಳಿದು
ಶಾಂತಿ ಸಹನೆ ಮೂಡಲಿ.

ಸ್ವಾರ್ಥ–ಹಿಂಸೆ–ಕಪಟ ತೊಲಗಿ
ಸತ್ಯದರಿವು ತಿಳಿಯಲಿ;
ನಾಡ ಜನರ ಉಸಿರಿನಲ್ಲಿ
ನಿನ್ನ ಹೆಸರು ಉಳಿಯಲಿ.

ಮೇಲು–ಕೀಳು, ಭೇದ–ಭಾವ
ತೊರೆದು ದೂರ ಹೋಗಲಿ;
ನಾಡ ಜನರು ಒಂದೇ ಎನುವ
ಭಾವದಿಂದ ಬೀಗಲಿ.

ನಾಡಿಗಾಗಿ ನಮ್ಮ ಜೀವ
ತೇದ ಗಂಧವಾಗಲಿ;
ನಾಡ ಹಿರಿಮೆ ಗರಿಯ ಬಿಚ್ಚಿ
ಜಗದ ತುಂಬ ಹರಡಲಿ.

■ **ರಾಜಶೇಖರ ಕುಕ್ಕುಂದಾ**



ಮಂಜುನಾಥ ಹುಲಕೊಪ್ಪದ

## ಕುಂಚ ಪ್ರಪಂಚ






**ಆಶ್ವಿ ಜೋಶಿ**
**ಜೈನ್ ಹೆರಿಟೇಜ್ ಶಾಲೆ, ಹೆಬ್ಬಾಳ**
**ಬೆಂಗಳೂರು**
2ನೇ ತರಗತಿ, ಇ ವಿಭಾಗ

## ನೀವೂ ಚಿತ್ರ ಬರೆಯಿರಿ

**ಸುಧಾ** ವಾರ ಪತ್ರಿಕೆಯ ಎಳೆಯರ ಅಂಗಳ ವಿಭಾಗಕ್ಕೆ ಕಥೆ- ಕವಿತೆ ಜೊತೆ ಮಕ್ಕಳೇ ಬರೆದ ವರ್ಣಚಿತ್ರ- ರೇಖಾ ಚಿತ್ರಗಳನ್ನು ಕಳುಹಿಸಬಹುದು.

**ಇ ಮೇಲ್:**
editorsu@sudha.co.in